**Subject Code : 30**

**March, 2014**

# ACCOUNTANCY

( Kannada and English Versions )

*Time : 3 Hours 15 Minutes* ] [ *Total No. of Questions : 24* ] [ *Max. Marks : 100*

**( Kannada Version )**

## ಭಾಗ – A

ಈ ಕೆಳಗಿನವುಗಳಲ್ಲಿ ಯಾವುದಾದರೂ ಎಂಟು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಎರಡು ಅಂಕಗಳು :

$8 \times 2 = 16$

1. ಏಕ ನಮೂದು ಪದ್ಧತಿಯ ಎರಡು ಲಕ್ಷಣಗಳನ್ನು ತಿಳಿಸಿ.

2. ಪಾಲುದಾರಿಕೆಯಲ್ಲಿ ಒಪ್ಪಂದದ ಪತ್ರ ಇಲ್ಲದಿದ್ದಾಗ ಪಾಲಿಸಬೇಕಾದ ಯಾವುದಾದರೂ ಎರಡು ನಿಯಮಗಳನ್ನು ತಿಳಿಸಿ.

3. ಪುನರ್ ಮೌಲ್ಯಖಾತೆ ಎಂದರೇನು ?

4. ಸಂಸ್ಥೆಯ ವಿಸರ್ಜನೆಯ ಸಮಯದಲ್ಲಿ ಪಾಲುಗಾರನು ಆಸ್ತಿಯನ್ನು ತೆಗೆದುಕೊಂಡಾಗ ಬರೆಯುವ ರೋಜು ದಾಖಲೆಯನ್ನು ನೀಡಿ.

5. ಶೇರುಗಳನ್ನು ಮುಖ ಬೆಲೆಗೆ ನೀಡುವುದು ಎಂದರೇನು ? ಒಂದು ಉದಾಹರಣೆ ತಿಳಿಸಿ.

6. ಈ ಕೆಳಗಿನವುಗಳನ್ನು ಕಂಪನಿಯ ಆಢಾವೆ ಪತ್ರಿಕೆಯ ಯಾವ ಶೀರ್ಷಿಕೆ ಅಡಿಯಲ್ಲಿ ತೋರಿಸುವಿರಿ ?

   a) ಸಿಬ್ಬಂದಿ ಸಾಲ

   b) ಪ್ರಸ್ತಾವಿಕ ಲಾಭಾಂಶ

7. ಸವಕಳಿ ಎಂದರೇನು ?

8. ವ್ಯಾಪಾರೇತರ ಸಂಸ್ಥೆಗಳು ಎಂದರೇನು ? ಒಂದು ಉದಾಹರಣೆ ಕೊಡಿ.

9. ಗಣಕೀಕೃತ ಲೆಕ್ಕ ಪದ್ಧತಿಯ ಯಾವುದಾದರೂ ಎರಡು ಲಕ್ಷಣಗಳನ್ನು ತಿಳಿಸಿ.

10. ದತ್ತಾಂಶ ಸಂಸ್ಕರಣೆ ಎಂದರೇನು ?

## ಭಾಗ – B

ಈ ಕೆಳಗಿನವುಗಳಲ್ಲಿ ಯಾವುದಾದರೂ ಮೂರು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಆರು ಅಂಕಗಳು : $3 \times 6 = 18$

11. ಸೂರಜ್ ಒಂದು ಸಂಸ್ಥೆಯ ಪಾಲುಗಾರನಾಗಿದ್ದು, ತನ್ನ ಸ್ವಂತಕ್ಕೆ ಈ ಕೆಳಗಿನ ಹಣವನ್ನು 31. 12. 2013 ಕ್ಕೆ ಕೊನೆಗೊಳ್ಳುವ ವರ್ಷದಲ್ಲಿ ಬಳಸಿದ್ದಾನೆ :

| | | | |
|---|---|---|---|
| ದಿನಾಂಕ | 31. 03. 2013 | ರೂ. | 6,000 |
| ದಿನಾಂಕ | 01. 07. 2013 | ರೂ. | 10,000 |
| ದಿನಾಂಕ | 31. 10. 2013 | ರೂ. | 4,000 |
| ದಿನಾಂಕ | 31. 12. 2013 | ರೂ. | 1,000 |

ಗುಣಲಬ್ಧ ಪದ್ಧತಿಯ ಪ್ರಕಾರ ಸ್ವಂತ ವೆಚ್ಚದ ಮೇಲೆ ಶೇ. 6 ರಂತೆ ಬಡ್ಡಿಯನ್ನು ಕಂಡುಹಿಡಿಯಿರಿ.

12. ಒಂದು ಪಾಲುಗಾರಿಕೆ ಸಂಸ್ಥೆಯಲ್ಲಿ ರಾಮು, ಲಕ್ಷ್ಮಣ ಮತ್ತು ಭರತ ಪಾಲುಗಾರರಾಗಿದ್ದು, ಅವರು 2 : 2 : 1 ರ ಪ್ರಮಾಣದಲ್ಲಿ ಲಾಭ-ನಷ್ಟವನ್ನು ಹಂಚಿಕೊಳ್ಳುತ್ತಿದ್ದು, ಲಕ್ಷ್ಮಣನು ಸಂಸ್ಥೆಯಿಂದ ನಿವೃತ್ತಿ ಹೊಂದುತ್ತಾನೆ. ಲಕ್ಷ್ಮಣನ ನಿವೃತ್ತಿಯ ನಂತರ ರಾಮ ಮತ್ತು ಭರತ ಪಾಲುಗಾರಿಕೆಯ ಲಾಭವನ್ನು ಸಮನಾಗಿ ಹಂಚಿಕೊಳ್ಳಲು ಒಪ್ಪಿರುತ್ತಾರೆ.

ರಾಮ ಮತ್ತು ಭರತ ಇವರುಗಳ ಗಳಿಕೆ ಪ್ರಮಾಣವನ್ನು ಕಂಡುಹಿಡಿಯಿರಿ.

13. ಆನಂದ, ರಮೇಶ ಮತ್ತು ಸುರೇಶ ಪಾಲುಗಾರರಾಗಿದ್ದು, ಅವರ ಲಾಭ-ನಷ್ಟಗಳ ಪ್ರಮಾಣ 3 : 2 : 1 ರಂತೆ ಇದೆ. ದಿನಾಂಕ 01. 01. 2013 ರಂದು ಅವರು ಅನುಕ್ರಮವಾಗಿ ರೂ. 45,000, ರೂ. 30,000 ಮತ್ತು ರೂ. 20,000 ಬಂಡವಾಳವನ್ನು ಹೊಂದಿರುತ್ತಾರೆ.

ದಿನಾಂಕ 30. 09. 2013 ರಂದು ರಮೇಶ ನಿಧನ ಹೊಂದಿದ್ದು, ಪಾಲುಗಾರಿಕೆಯ ಒಪ್ಪಂದ ಈ ಕೆಳಗಿನ ಅಂಶಗಳನ್ನೊಳಗೊಂಡಿದೆ :

a) ಪಾಲುಗಾರರ ಬಂಡವಾಳದ ಮೇಲಿನ ಬಡ್ಡಿ ವಾರ್ಷಿಕ ಶೇಕಡಾ 10.

b) ರಮೇಶನಿಗೆ ತಿಂಗಳ ಸಂಬಳ ರೂ. 1,000.

c) ರಮೇಶನ ಪಾಲಿನ ಕೀರ್ತಿಮೌಲ್ಯ.

d) ಹಿಂದಿನ ವರ್ಷದ ಲಾಭದ ಆಧಾರದ ಮೇಲೆ ಮರಣ ಹೊಂದಿದ ದಿನಾಂಕದವರೆಗಿನ ಪಾಲನ್ನು ಪಡೆಯಬಹುದು.

   i) ಸಂಸ್ಥೆಯ ಒಟ್ಟು ಕೀರ್ತಿಮೌಲ್ಯ ರೂ. 27,000.

   ii) 2012 ರ ಸಂಸ್ಥೆಯ ಒಟ್ಟು ಲಾಭ ರೂ. 15,000.

ರಮೇಶನ ವಾರಸುದಾರರಿಗೆ ನೀಡಬೇಕಾದ ಮೊತ್ತವನ್ನು, ವಾರಸುದಾರರ ಖಾತೆಯನ್ನು ತಯಾರಿಸಿ ಧೃಡೀಕರಿಸಿ.

14. *ABC* ಕಂಪನಿ ನಿಯಮಿತ, ರೂ. 100 ಮೌಲ್ಯದ 500 ಶೇರುಗಳನ್ನು ಅವುಗಳ ಮೇಲೆ ರೂ. 25 ರ ಅಂತಿಮ ಕರೆಯ ಹಣ ಪಾವತಿಯಾಗದಿದ್ದಕ್ಕೆ ಮುಟ್ಟುಗೋಲು ಹಾಕಿಕೊಂಡಿತು. ನಂತರ ಈ ಶೇರುಗಳನ್ನು ಪ್ರತಿ ಶೇರಿಗೆ ರೂ. 80 ರಂತೆ ಮರು ಬಿಡುಗಡೆ ಮಾಡಿತು.

*ABC* ಕಂಪನಿ ನಿಯಮಿತದ ಲೆಕ್ಕಪತ್ರಗಳಲ್ಲಿ ಅವಶ್ಯವಿರುವ ರೋಜು ದಾಖಲೆಗಳನ್ನು ಬರೆಯಿರಿ.

15. ಕೈಯಿಂದ (ಮ್ಯಾನುಯಲ್) ಮಾಡಿದ ಲೆಕ್ಕ ಪದ್ಧತಿಗೂ ಮತ್ತು ಗಣಕೀಕೃತ ಲೆಕ್ಕ ಪದ್ಧತಿಗೂ ಇರುವ ಯಾವುದಾದರೂ ಆರು ವ್ಯತ್ಯಾಸಗಳನ್ನು ಬರೆಯಿರಿ.

## ಭಾಗ – C

ಕೆಳಗಿನವುಗಳಲ್ಲಿ ಯಾವುದಾದರೂ ನಾಲ್ಕು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಹದಿನಾಲ್ಕು ಅಂಕಗಳು : $4 \times 14 = 56$

16. ವಿಜಯ ಕುಮಾರ ತನ್ನ ಲೆಕ್ಕಗಳನ್ನು ಏಕ ನಮೂದು ಪದ್ಧತಿಯ ಪ್ರಕಾರ ಇಟ್ಟಿರುತ್ತಾರೆ ಮತ್ತು ಈ ಕೆಳಗಿನ ಮಾಹಿತಿಯನ್ನು ನೀಡಿದ್ದಾರೆ :

| *ವಿವರಗಳು* | **01. 01. 2013** ರೂ. | **31. 12. 2013** ರೂ. |
|---|---|---|
| ಋಣಿಗಳು | 7,800 | 7,250 |
| ಧನಿಗಳು | 4,500 | 5,450 |
| ಬ್ಯಾಂಕ್ ಮೀರೆಳತ ( BOD ) | 6,400 | — |
| ನಗದು | 1,100 | 2,000 |
| ಬ್ಯಾಂಕಿನಲ್ಲಿ ನಗದು | — | 3,200 |
| ಕೊಡತಕ್ಕ ಹುಂಡಿಗಳು | — | 3,000 |
| ಸರಕು | 24,000 | 40,000 |
| ಯಂತ್ರೋಪಕರಣ | 60,000 | 60,000 |
| ಮೋಟಾರು ಕಾರು | 80,000 | 80,000 |

ಅವರು ವರ್ಷದ ಅವಧಿಯಲ್ಲಿ ರೂ. 5,000 ನಗದು ಮತ್ತು ರೂ. 5,000 ಬೆಲೆಯ ಸರಕುಗಳನ್ನು ವ್ಯಾಪಾರದಿಂದ ಸ್ವಂತಕ್ಕಾಗಿ ಬಳಸಿಕೊಂಡಿದ್ದಾರೆ ಮತ್ತು ದಿನಾಂಕ 01. 04. 2013 ರಂದು ರೂ. 10,000 ಗಳನ್ನು ಹೆಚ್ಚುವರಿ ಬಂಡವಾಳವಾಗಿ ತಂದಿರುತ್ತಾರೆ.

*ಹೊಂದಾಣಿಕೆಗಳು :*

a) ಯಂತ್ರದ ಮೇಲೆ ವರ್ಷಕ್ಕೆ ಶೇ. 5 ರಂತೆ ಸವಕಳಿ ಮತ್ತು ಮೋಟಾರು ಕಾರು ಮೇಲೆ ರೂ. 4,000 ಮನ್ನಾ ಮಾಡಬೇಕು.

b) ಕರಡು ಸಾಲ ರೂ. 250 ಕಳೆಯಿರಿ ಮತ್ತು ಸಂಶಯಾಸ್ಪದ ಸಾಲಕ್ಕಾಗಿ ಋಣಿಗಳ ಮೇಲೆ ಶೇ. 5 ರಂತೆ ಮೀಸಲು ತೆಗೆಯಿರಿ.

c) ಬಾಕಿ ಸಂಬಳ ರೂ. 1,000 ಮತ್ತು ಬರಬೇಕಾದ ಕಮಿಷನ್ ರೂ. 1,000.

d) ಹೆಚ್ಚುವರಿ ಬಂಡವಾಳವೂ ಸೇರಿದಂತೆ ಬಂಡವಾಳದ ಮೇಲೆ ಶೇ. 5 ರಂತೆ ಬಡ್ಡಿಯನ್ನು ವಿಧಿಸಿ.

*ತಯಾರಿಸಿ :*

i) ವ್ಯವಹಾರದ ಸ್ಥಿತಿ ಪಟ್ಟಿಗಳು

ii) ಲಾಭ ಅಥವಾ ನಷ್ಟ ಪಟ್ಟಿ

iii) 31. 12. 2013 ರ ಪುನರ್‌ವಿಮರ್ಶಿತ ಸ್ಥಿತಿ ಪಟ್ಟಿ

17. ಪಾಲುಗಾರರಾದ ವಾಣಿ ಮತ್ತು ಸಂಧ್ಯಾ ತಮ್ಮ ಲಾಭ-ನಷ್ಟವನ್ನು 3 : 2 ರ ಪ್ರಮಾಣದಲ್ಲಿ ಹಂಚಿಕೊಳ್ಳುವರು. ದಿನಾಂಕ 31. 12. 2013 ರಂದು ಅವರ ಆಢಾವೆ ಪತ್ರಿಕೆ ಈ ಕೆಳಗಿನಂತಿವೆ :

**ದಿನಾಂಕ 31. 12. 2013 ರ ಆಢಾವೆ ಪತ್ರಿಕೆ**

| ಹೊಣೆಗಾರಿಕೆಗಳು | | ರೂ. | ಆಸ್ತಿಗಳು | | ರೂ. |
|---|---|---|---|---|---|
| ಧನಿಗಳು | | 57,000 | ಬ್ಯಾಂಕಿನಲ್ಲಿ ನಗದು | | 21,500 |
| ಕೊಡತಕ್ಕ ಹುಂಡಿ | | 20,500 | ಬರತಕ್ಕ ಹುಂಡಿ | | 4,000 |
| ಮೀಸಲು ನಿಧಿ | | 20,000 | ಋಣಿಗಳು | 60,000 | |
| ಲಾಭ-ನಷ್ಟ ಖಾತೆ | | 5,000 | – ಮೀಸಲು | 3,000 | 57,000 |
| *ಬಂಡವಾಳಗಳು :* | | | ಸರಕು | | 35,000 |
| ವಾಣಿ | 60,000 | | ಪೀಠೋಪಕರಣಗಳು | | 10,000 |
| ಸಂಧ್ಯಾ | 30,000 | 90,000 | ಕಟ್ಟಡಗಳು | | 40,000 |
| | | | ಯಂತ್ರಗಳು | | 25,000 |
| | | **1,92,500** | | | **1,92,500** |

ದಿನಾಂಕ 01. 01. 2014 ರಂದು ಲಕ್ಷ್ಮಿಗೆ ಈ ಕೆಳಗಿನ ಕರಾರುಗಳ ಮೇಲೆ ಪಾಲುಗಾರಿಕೆಗೆ ಪ್ರವೇಶ ನೀಡಲಾಯಿತು :

a) ಅವರು $\frac{1}{4}$ ರ ಪಾಲುಗಾರಿಕೆ ರೂ. 40,000 ಬಂಡವಾಳ ಮತ್ತು ಕೀರ್ತಿಮೌಲ್ಯವಾಗಿ ರೂ. 25,000 ನಗದು ತರಬೇಕು.

b) ಯಂತ್ರ ಮತ್ತು ಪೀಠೋಪಕರಣಗಳ ಮೇಲೆ ಶೇ. 10 ರಷ್ಟು ಸವಕಳಿ ತೆಗೆಯಿರಿ.

c) ಕಟ್ಟಡಗಳ ಮೌಲ್ಯಯನ್ನು ಶೇ. 20 ರಷ್ಟು ಹೆಚ್ಚಿಸಿ.

d) ಕರಡು ಸಾಲದ ಮೀಸಲನ್ನು ರೂ. 3,000 ಹೆಚ್ಚಿಸಿ.

e) ಧನಿಗಳಲ್ಲಿ ಸೇರಿಕೊಂಡ ರೂ. 2,000 ಪಾವತಿಸಬೇಕಾಗಿಲ್ಲ. ಆದುದರಿಂದ ಅದನ್ನು ತೆಗೆದುಹಾಕುಬಹುದು.

*ತಯಾರಿಸಿ :*

i) ಪುನರ್ ಮೌಲ್ಯಖಾತೆ

ii) ಪಾಲುಗಾರರ ಬಂಡವಾಳ ಖಾತೆಗಳು

iii) ಬ್ಯಾಂಕಿನ ಖಾತೆ

iv) 01. 01. 2014 ರ ಹೊಸ ಆಢಾವೆ ಪತ್ರಿಕೆ

18. ನಾರಾಯಣ ಮತ್ತು ರಘುರಾಮ ಒಂದು ಸಂಸ್ಥೆಯಲ್ಲಿ ಲಾಭ-ನಷ್ಟಗಳನ್ನು ಸಮವಾಗಿ ಹಂಚಿಕೊಳ್ಳುವ ಪಾಲುಗಾರರು. ಅವರ ಆಢಾವೆ ಪತ್ರಿಕೆ ದಿನಾಂಕ 31. 12. 2013 ರಂದು ಈ ಕೆಳಗಿನಂತೆ ಇದೆ :

**ದಿನಾಂಕ 31. 12. 2013 ರ ಆಢಾವೆ ಪತ್ರಿಕೆ**

| *ಹೊಣೆಗಾರಿಕೆಗಳು* | *ರೂ.* | *ಆಸ್ತಿಗಳು* | *ರೂ.* |
|---|---|---|---|
| ಧನಿಗಳು | 35,000 | ಬ್ಯಾಂಕಿನಲ್ಲಿರುವ ನಗದು | 20,000 |
| ಕೊಡತಕ್ಕ ಹುಂಡಿಗಳು | 10,000 | ಋಣಿಗಳು | 45,000 |
| ನಾರಾಯಣರ ಸಾಲ | 27,000 | ಬರತಕ್ಕ ಹುಂಡಿಗಳು | 15,000 |
| ಮೀಸಲು ನಿಧಿ | 18,000 | ದಾಸ್ತಾನು | 40,000 |
| *ಬಂಡವಾಳಗಳು :* | | ಕಟ್ಟಡ | 60,000 |
| ನಾರಾಯಣ | 60,000 | ಮೋಟಾರು ವಾಹನ | 30,000 |
| ರಘುರಾಮ | 70,000 | ಲಾಭ-ನಷ್ಟ ಖಾತೆ | 10,000 |
| | **2,20,000** | | **2,20,000** |

ಮೇಲಿನ ದಿನಾಂಕದಂದು ಪಾಲುಗಾರಿಕೆ ಸಂಸ್ಥೆಯನ್ನು ಈ ಕೆಳಕಂಡ ನಿಬಂಧನೆಗಳಂತೆ ವಿಸರ್ಜಿಸಲಾಯಿತು :

a) ಆಸ್ತಿಗಳ ವಿಲೇವಾರಿ :

| | | |
|---|---|---|
| ಋಣಿಗಳು | ರೂ. | 42,000 |
| ಬರತಕ್ಕ ಹುಂಡಿಗಳು | ರೂ. | 15,000 |
| ದಾಸ್ತಾನು | ರೂ. | 60,000 |
| ಕಟ್ಟಡ | ರೂ. | 40,000 |
| ಮೋಟಾರು ವಾಹನ | ರೂ. | 22,000 |

b) ಧನಿಗಳನ್ನು ಮತ್ತು ಕೊಡತಕ್ಕ ಹುಂಡಿಗಳನ್ನು ಪೂರ್ತಿ ಪಾವತಿ ಮಾಡಲಾಗಿದೆ.

c) ವಿಸರ್ಜನಾ ವೆಚ್ಚ ರೂ. 2,000 ಪಾವತಿಸಲಾಗಿದೆ

*ತಯಾರಿಸಿ :*

i) ವಿಲೇವಾರಿ ಖಾತೆ

ii) ಪಾಲುಗಾರರ ಬಂಡವಾಳ ಖಾತೆ

iii) ಬ್ಯಾಂಕಿನ ಖಾತೆ

19. ಒಂದು ಕಂಪನಿಯು ದಿನಾಂಕ 01. 01. 2010 ರಂದು ರೂ. 1,00,000 ನೀಡಿ ನಾಲ್ಕು ವರ್ಷದ ಅವಧಿಗೆ ಗುತ್ತಿಗೆ ಪಡೆಯುತ್ತದೆ. ಸವಕಳಿಯನ್ನು ವರ್ಷಾಸನ ಪದ್ಧತಿಯಲ್ಲಿ ವಾರ್ಷಿಕ ಶೇಕಡಾ 5 ಬಡ್ಡಿದರದಲ್ಲಿ ನೀಡಲು ತೀರ್ಮಾನಿಸಲಾಗಿದೆ. ವರ್ಷಾಸನ ಕೋಷ್ಟಕ ದರದಂತೆ ವಾರ್ಷಿಕ ಸವಕಳಿ ಮೊತ್ತವು ರೂ. 28,201·18 ಆಗಿರುತ್ತದೆ.

ಈ ಕೆಳಗಿನವುಗಳನ್ನು ತಯಾರಿಸಿ :

i) 4 ವರ್ಷಗಳಿಗೆ ಗುತ್ತಿಗೆ ಖಾತೆ

ii) 4 ವರ್ಷಗಳಿಗೆ ಬಡ್ಡಿ ಖಾತೆ

20. ಬೆಂಗಳೂರು ಕಂಪನಿ ನಿಯಮಿತ, ಬೆಂಗಳೂರು ಇದರ ತಾಳೆ ಪಟ್ಟಿ ದಿನಾಂಕ 31. 12. 2013 ಕ್ಕೆ ಈ ಕೆಳಗಿನಂತಿದೆ :

**ದಿನಾಂಕ 31. 12. 2013 ರ ತಾಳೆ ಪಟ್ಟಿ**

| ವಿವರಗಳು | ಖರ್ಚು ರೂ. | ಜಮಾ ರೂ. |
|---|---|---|
| ಶೇರು ಬಂಡವಾಳ (ರೂ. 10 ರ 30,000 ಈಕ್ವಿಟಿ ಶೇರುಗಳು) | — | 3,00,000 |
| ಮೀಸಲು ನಿಧಿ | — | 1,25,000 |
| ಸಂಬಳ | 10,000 | — |
| ಪೀಠೋಪಕರಣ | 50,000 | — |
| ಕಟ್ಟಡ | 2,00,000 | — |
| ಶೇ. 10 ರ ಸಾಲ ಪತ್ರಗಳು | — | 1,50,000 |
| ಪ್ರಾರಂಭಿಕ ದಾಸ್ತಾನು | 65,000 | — |
| ಖರೀದಿ ಮತ್ತು ಮಾರಾಟ | 1,50,000 | 2,60,000 |
| ವಾಪಸಾತಿಗಳು ( Returns ) | 5,000 | 10,000 |
| ಕೀರ್ತಿಮೌಲ್ಯ | 50,000 | — |
| ಹೂಡಿಕೆಗಳು | 80,000 | — |
| ಕರೆಗಳ ಬಾಕಿ | 25,000 | — |
| ಬ್ಯಾಂಕಿನಲ್ಲಿ ನಗದು | 30,000 | — |
| ಲಾಭ-ನಷ್ಟ ವಿನಿಯೋಗ ಖಾತೆ | — | 25,000 |
| ವಾಹನಗಳು | 50,000 | — |
| ಪೂರ್ವಿಭಾವಿ ವೆಚ್ಚಗಳು | 30,000 | — |
| ಸಾಗಾಣಿಕ ವೆಚ್ಚ ( Freight ) | 7,000 | — |
| ಲೆಕ್ಕ ಪರಿಶೋಧನಾ ಶುಲ್ಕ | 8,000 | — |
| ಬರತಕ್ಕ ಹುಂಡಿಗಳು | 35,000 | — |
| ಪಾವತಿಸಬೇಕಾದ ಹುಂಡಿಗಳು | — | 10,000 |
| ಲಾಭಾಂಶ ( Dividend ) | 20,000 | — |
| ಋಣಿಗಳು ಮತ್ತು ಧನಿಗಳು | 1,50,000 | 1,20,000 |
| ಕೂಲಿ | 35,000 | — |
| | **10,00,000** | **10,00,000** |

*ಹೊಂದಾಣಿಕೆಗಳು :*

a) ದಿನಾಂಕ 31. 12. 2013 ಕ್ಕೆ ಅಂತಿಮ ಶಿಲ್ಕು ರೂ. 1,25,000.

b) ವಾರ್ಷಿಕ ಶೇ. 10 ರಂತೆ ಪೀಠೋಪಕರಣ ಮತ್ತು ಕಟ್ಟಡದ ಮೇಲೆ ಸವಕಳಿ ತೆಗೆಯಿರಿ.

c) ಋಣಿಗಳ ಮೇಲೆ ಶೇ. 5 ರಷ್ಟು ಸಂಶಯಾಸ್ಪದ ನಿಧಿಯನ್ನು ಕಾಯ್ದಿರಿಸಿ.

d) ರೂ. 30,000 ಗಳನ್ನು ಮೀಸಲು ನಿಧಿಗೆ ವರ್ಗಾಯಿಸಿ.

e) ಸಾಲ ಪತ್ರಗಳ ಮೇಲೆ ಶೇ. 10 ರಂತೆ ಒಂದು ವರ್ಷದ ಬಡ್ಡಿ ಬಾಕಿ ಇದೆ.

ನಿಗದಿತ ನಮೂನೆಯಲ್ಲಿ ದಿನಾಂಕ 31. 12. 2013 ಕ್ಕೆ ಕಂಪೆನಿಯ ಅಖೈರು ಖಾತೆಗಳನ್ನು ತಯಾರಿಸಿ.

21. ಈ ಕೆಳಗಿನ ಅಢಾವೆ ಪತ್ರಿಕೆ ಮತ್ತು ಸ್ವೀಕೃತಿ ಮತ್ತು ಪಾವತಿ ಖಾತೆಯು ಚಿಕ್ಕಮಗಳೂರು ಸ್ಪೋರ್ಟ್ಸ್ ಕ್ಲಬ್, ಚಿಕ್ಕಮಗಳೂರು ಇವರಿಗೆ ಸಂಬಂಧ ಪಟ್ಟಿದೆ :

**ದಿನಾಂಕ 31. 12. 2012 ರ ಅಢಾವೆ ಪತ್ರಿಕೆ**

| *ಹೊಣೆಗಾರಿಕೆಗಳು* | *ರೂ.* | *ಆಸ್ತಿಗಳು* | *ರೂ.* |
|---|---|---|---|
| ಕೊಡತಕ್ಕ ಸಂಬಳ | 3,500 | ನಗದು | 10,500 |
| ಮುಂಗಡವಾಗಿ ಪಡೆದ ವಂತಿಗೆ | 2,000 | ಕ್ರೀಡಾ ಸಾಮಾಗ್ರಿ | 25,000 |
| ಬಂಡವಾಳ ನಿಧಿ | 92,000 | ಪೀಠೋಪಕರಣ | 12,000 |
| | | ಭೂಮಿ ಮತ್ತು ಕಟ್ಟಡ | 50,000 |
| | **97,500** | | **97,500** |

**31. 12. 2013 ಕ್ಕೆ ಕೊನೆಗೊಳ್ಳುವ ಸ್ವೀಕೃತಿ ಮತ್ತು ಪಾವತಿ ಖಾತೆ**

| *ಸ್ವೀಕೃತಿ* | *ರೂ.* | *ಪಾವತಿ* | *ರೂ.* |
|---|---|---|---|
| ಗೆ ಆರಂಭಿಕ ಶಿಲ್ಕು | 10,500 | ಯಿಂದ ಸಂಬಳ | 23,000 |
| " ವಂತಿಗೆಗಳು | 42,000 | " ಕ್ರೀಡಾ ಸಾಮಗ್ರಿ ( 01. 07. 2013 ) | 14,000 |
| " ಪ್ರವೇಶ ಶುಲ್ಕ | 5,000 | " ಹೂಡಿಕೆಗಳು | 10,000 |
| " ಹಳೆ ಪತ್ರಿಕೆಗಳ ಮಾರಾಟ | 1,500 | " ಅಂಚೆ ವೆಚ್ಚ | 1,200 |
| " ಕ್ರೀಡಾ ಶುಲ್ಕ | 7,200 | " ವಿದ್ಯುಚ್ಛಕ್ತಿ | 2,300 |
| | | " ಮೈದಾನ ನಿರ್ವಹಣಾ ವೆಚ್ಚ | 4,500 |
| | | " ಅಂತಿಮ ಶಿಲ್ಕು (ಮುಂದುವರೆಸಿದ್ದು) | 11,200 |
| | **66,200** | | **66,200** |

*ಹೊಂದಾಣಿಕೆಗಳು :*

a) 2013 ನೇ ವರ್ಷಕ್ಕೆ ಬಾಕಿ ಬರಬೇಕಾದ ವಂತಿಗೆ ರೂ. 1,000.

b) ಸಂಬಳ ಬಾಕಿ 31. 12. 2013 ರೂ. 4,500.

c) ಅರ್ಧದಷ್ಟು ಪ್ರವೇಶ ಶುಲ್ಕವನ್ನು ಬಂಡವಾಳೀಕರಿಸುವುದು.

d) ಕ್ರೀಡಾ ಸಾಮಗ್ರಿಗಳ ಮೇಲೆ ಶೇ. 20 ರಂತೆ ಹಾಗೂ ಪೀಠೋಪಕರಣಗಳ ಮೇಲೆ ಶೇ. 5 ರಂತೆ ಸವಕಳಿ ತೆಗೆಯುವುದು.

31. 12. 2013 *ಕ್ಕೆ ತಯಾರಿಸಿ :*

i) ಆದಾಯ ಮತ್ತು ವೆಚ್ಚ ಖಾತೆ

ii) ಅಢಾವೆ ಪತ್ರಿಕೆ

## ಭಾಗ – D

*( ಪ್ರಾಯೋಗಿಕ ಪ್ರಶ್ನೆಗಳು )*

ಈ ಕೆಳಗಿನವುಗಳಲ್ಲಿ ಯಾವುದಾದರೂ ಎರಡು ಪ್ರಶ್ನೆಗಳಿಗೆ ಉತ್ತರಿಸಿ. ಪ್ರತಿ ಪ್ರಶ್ನೆಗೆ ಐದು ಅಂಕಗಳು : $2 \times 5 = 10$

22. ಆರಂಭದ ಬಂಡವಾಳವನ್ನು ಕಂಡುಹಿಡಿಯಲು ಐದು ಕಾಲ್ಪನಿಕ ಅಂಕಿ–ಅಂಶಗಳನ್ನೊಳಗೊಂಡ ವ್ಯವಹಾರದ ಸ್ಥಿತಿಪಟ್ಟಿಯನ್ನು ತಯಾರಿಸಿ.

23. ಕಾಲ್ಪನಿಕ ಮೊಬಲಗುಗಳ ಸಹಾಯದಿಂದ ಎರಡು ವರ್ಷಕ್ಕೆ ಕಡಿಮೆಯಾಗುವ ( Diminishing ) ಶಿಲ್ಕು ಸವಕಳಿ ಪದ್ಧತಿಯ ಪ್ರಕಾರ ಯಂತ್ರ ಖಾತೆಯನ್ನು ತಯಾರಿಸಿ.

24. ಈ ಕೆಳಗಿನ ಅಂಶಗಳನ್ನು ಬಂಡವಾಳ ಮತ್ತು ಕಂದಾಯವಾಗಿ ವಿಂಗಡಿಸಿ :

    a) ಮೃತ್ಯುದತ್ತಿ

    b) ಗಣಕಯಂತ್ರದ ಖರೀದಿ

    c) ವಂತಿಗೆ

    d) ಆಜೀವ ಸದಸ್ಯತ್ವ

    e) ಮುದ್ರಣ ಮತ್ತು ಸಾದಿಲವ್ವಾರು

Subject Code : 30

**( English Version )**

## SECTION – A

Answer any *eight* questions. Each question carries *two* marks. $8 \times 2 = 16$

1. State two features of Single Entry System.
2. Mention any two rules to be followed in the absence of Partnership Deed.
3. What is Revaluation Account ?
4. Give the Journal entry for the asset taken over by partner in case of dissolution of firm.
5. What do you mean by Issue of shares at par ? Give an example.
6. Under what heading do you show the following in Company Balance Sheet ?
   a) Loans to Employees
   b) Proposed Dividend.
7. What is Depreciation ?
8. What are non-trading concerns ? Give an example.
9. Mention two features of Computerised Accounting.
10. What is Data Processing ?

## SECTION – B

Answer any *three* of the following questions. Each question carries *six* marks.

$3 \times 6 = 18$

11. Suraj, a partner in a firm, has withdrawn the following amounts during the year ended on 31. 12. 2013 :

    Rs. 6,000 on 31. 3. 2013

    Rs. 10,000 on 1. 7. 2013

    Rs. 4,000 on 31. 10. 2013

    Rs. 1,000 on 31. 12. 2013

    Calculate interest on drawings at 6% per annum under Product method.

12. Rama, Lakshmana and Bharatha are partners in a firm sharing profits and losses in the ratio of 2 : 2 : 1 respectively. Lakshmana retires from the firm. Rama and Bharatha agree to share the future profits equally.

Calculate the Benefit Ratio of the remaining partners.

13. Anand, Ramesh and Suresh are partners sharing profits and losses in the ratio of 3 : 2 : 1. Their capital balances on 1. 1. 2013 stood at Rs. 45,000, Rs. 30,000 and Rs. 20,000 respectively. Ramesh died on 30. 9. 2013. Partnership deed provides the following :

a) Interest on capital at 10% per annum.

b) Salary to Ramesh Rs. 1,000 per month.

c) His share of goodwill.

d) His share of profit up to the date of death on the basis of previous year's profit.

i) Total goodwill of the firm Rs. 27,000.

ii) Profit of the firm for the year 2012 Rs. 15,000.

You are required to ascertain the amount payable to Ramesh's Executors by preparing Executor's Account.

14. *ABC* Co. Limited forfeited 500 shares of Rs. 100 each for non-payment of the final call money of Rs. 25 per share. Later, these shares were re-issued at Rs. 80 per share.

Give necessary Journal entries in the books of *ABC* Co. Ltd.

15. Write any six differences between Manual Accounting and Computerised Accounting.

## SECTION – C

Answer any *four* of the following questions. Each question carries *fourteen* marks.

4 × 14 = 56

16. Vijay Kumar is a merchant keeping his books of accounts under Single Entry system. He gave the following information :

| ***Particulars*** | ***1. 1. 2013*** ***Rs.*** | ***31. 12. 2013*** ***Rs.*** |
|---|---|---|
| Sundry Debtors | 7,800 | 7,250 |
| Sundry Creditors | 4,500 | 5,450 |
| Bank Overdraft | 6,400 | — |
| Cash | 1,100 | 2,000 |
| Cash in Bank | — | 3,200 |
| Bills Payable | — | 3,000 |
| Stock | 24,000 | 40,000 |
| Machinery | 60,000 | 60,000 |
| Motor Car | 80,000 | 80,000 |

During the year, he withdrew cash Rs. 5,000 and goods worth Rs. 5,000 for his personal use. He introduced Rs. 10,000 as fresh capital ( additional ) as on 1. 4. 2013.

*Adjustments* :

a) Depreciate Machinery by 5% per annum and write off Rs. 4,000 from Motor Car.

b) Write off Bad Debts Rs. 250 and create 5% on debtors as RBD.

c) Outstanding Salary Rs. 1,000 and Commission due but not received Rs. 1,000.

d) Allow interest on capital at 5% including on additional capital.

Prepare

i) Statement of affairs

ii) Statement of Profit or Loss

iii) Revised statement of affairs as on 31. 12. 2013.

17. Vani and Sandhya are partners sharing profits and losses in the ratio of 3 : 2. Their Balance Sheet as on 31. 12. 2013 was as follows :

**Balance Sheet as on 31. 12. 2013**

| ***Liabilities*** | | ***Rs.*** | ***Assets*** | | ***Rs.*** |
|---|---|---|---|---|---|
| Creditors | | 57,000 | Cash at Bank | | 21,500 |
| Bills Payable | | 20,500 | Bills Receivable | | 4,000 |
| Reserve | | 20,000 | Debtors | 60,000 | |
| Profit and Loss A/c | | 5,000 | *Less* RBD | 3,000 | 57,000 |
| *Capitals* : | | | Stock | | 35,000 |
| Vani | 60,000 | | Furniture | | 10,000 |
| Sandhya | 30,000 | 90,000 | Buildings | | 40,000 |
| | | | Machinery | | 25,000 |
| | | **1,92,500** | | | **1,92,500** |

On 1. 1. 2014 Lakshmi is admitted into partnership on the following terms :

a) She should bring Rs. 40,000 as capital for $\frac{1}{4}$ th share and 25,000 towards goodwill.

b) Depreciate machinery and furniture by 10%.

c) Appreciate Buildings by 20%.

d) Increase RBD on Debtors by Rs. 3,000.

e) An amount of Rs. 2,000 due to a creditor is not likely to be claimed and hence to be written off.

Prepare

i) Revaluation A/c

ii) Partners' Capital Accounts

iii) Bank Account

iv) New Balance Sheet as on 1. 1. 2014.

18. Narayana and Raghurama are partners in a firm sharing profits and losses equally. Their Balance Sheet as on 31. 12. 2013 was as follows :

**Balance Sheet as on 31. 12. 2013**

| ***Liabilities*** | **Rs.** | ***Assets*** | **Rs.** |
|---|---|---|---|
| Creditors | 35,000 | Cash at Bank | 20,000 |
| Bills Payable | 10,000 | Debtors | 45,000 |
| Narayana's Loan | 27,000 | Bills Receivable | 15,000 |
| Reserve | 18,000 | Stock | 40,000 |
| *Capitals* : | | Building | 60,000 |
| Narayana | 60,000 | Motor Vehicle | 30,000 |
| Raghurama | 70,000 | Profit & Loss A/c | 10,000 |
| | **2,20,000** | | **2,20,000** |

On the above date, they decided to dissolve the firm on the following terms :

a) The Assets realised as follows :

| | | |
|---|---|---|
| Debtors | Rs. | 42,000 |
| Bills Receivable | Rs. | 15,000 |
| Stock | Rs. | 60,000 |
| Building | Rs. | 40,000 |
| Motor Vehicle | Rs. | 22,000 |

b) Creditors and Bills Payable paid in full.

c) Dissolution expenses paid Rs. 2,000.

Prepare

i) Realisation Account

ii) Partners' Capital Accounts

iii) Bank Account.

19. A company acquires lease on 1. 1. 2010 for a term of 4 years, by payment of Rs. 1,00,000. It is proposed to depreciate the lease by Annuity Method, charging 5% Interest.

As per annuity tables, the amount to be written off annually comes to Rs. 28,201·18.

Show

i) Lease Account for four years and

ii) Interest Account for four years.

20. Following is the Trial Balance of Bangalore Company Limited, Bangalore.

**Trial Balance as on 31. 12. 2013**

| ***Particulars*** | ***Debit (Rs.)*** | ***Credit (Rs.)*** |
|---|---|---|
| Share Capital 30,000 equity shares @ Rs. 10 each | — | 3,00,000 |
| Reserve Fund | — | 1,25,000 |
| Salary | 10,000 | — |
| Furniture | 50,000 | — |
| Building | 2,00,000 | — |
| 10% Debentures | — | 1,50,000 |
| Opening Stock | 65,000 | — |
| Purchases and Sales | 1,50,000 | 2,60,000 |
| Returns | 5,000 | 10,000 |
| Goodwill | 50,000 | — |
| Investments | 80,000 | — |
| Calls in arrears | 25,000 | — |
| Cash at Bank | 30,000 | — |
| Profit and Loss Appropriation A/c | — | 25,000 |
| Vehicles | 50,000 | — |
| Preliminary Expenses | 30,000 | — |
| Freight | 7,000 | — |
| Audit Fees | 8,000 | — |
| Bills Receivable | 35,000 | — |
| Bills Payable | — | 10,000 |
| Dividend | 20,000 | — |
| Debtors and Creditors | 1,50,000 | 1,20,000 |
| Wages | 35,000 | — |
| | **10,00,000** | **10,00,000** |

*Adjustments* :

a) Closing stock was valued at Rs. 1,25,000 on 31. 12. 2013.

b) Depreciate Furniture and Building at 10% per annum.

c) Provide RBD on Debtors at 5%.

d) Transfer Rs. 30,000 to Reserve Fund.

e) Interest on debenture was outstanding at 10% for one year.

Prepare the Final Accounts of the company for the year ended 31. 12. 2013 in the prescribed form.

21. Following are the Balance Sheet and Receipts and Payments Account of Chikmagalur Sports Club, Chikmagalur.

**Balance Sheet as on 31. 12. 2012**

| *Liabilities* | Rs. | *Assets* | Rs. |
|---|---|---|---|
| Outstanding Salary | 3,500 | Cash | 10,500 |
| Pre-received Subscription | 2,000 | Sports materials | 25,000 |
| Capital Fund | 92,000 | Furniture | 12,000 |
| | | Land & Building | 50,000 |
| | **97,500** | | **97,500** |

**Receipts and Payments A/c for the year ended 31. 12. 2013**

| *Receipts* | Rs. | *Payments* | Rs. |
|---|---|---|---|
| To Balance b/d | 10,500 | By Salary | 23,000 |
| To Subscriptions | 42,000 | By Sports Materials ( 1. 7. 2013 ) | 14,000 |
| To Entrance Fees | 5,000 | By Investments | 10,000 |
| To Sale of old newspapers | 1,500 | By Postage | 1,200 |
| To Sports Fees | 7,200 | By Electricity Charges | 2,300 |
| | | By Up-keep of grounds | 4,500 |
| | | By Balance c/d | 11,200 |
| | **66,200** | | **66,200** |

*Adjustments* :

a) Outstanding subscriptions for 2013 Rs. 1,000.

b) Outstanding salary as on 31. 12. 2013 Rs. 4,500.

c) Half of the entrance fees to be capitalised.

d) Depreciate Sports materials at 20% per annum and furniture at 5% per annum.

Prepare :

i) Income and Expenditure Account on 31. 12. 2013.

ii) Balance Sheet on 31. 12. 2013.

## SECTION – D

## ( PRACTICAL ORIENTED QUESTIONS )

Answer any *two* of the following. Each question carries *five* marks. $2 \times 5 = 10$

22. Prepare a statement of affairs to find out opening capital with five imaginary figures.

23. Prepare a Machinery Account for two years with imaginary figures under Diminishing Balance Method of depreciation.

24. Classify the following into Capital and Revenue :

a) Legacies

b) Purchase of Computer

c) Subscriptions

d) Life Membership Fees

e) Printing and Stationery.